## ಟ್ರಂಪ್ ಮತ್ತು ಹಕ್ಕಿ!

ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಶ್ವದ ಗಮನ ಸೆಳೆದಂತೆ, ಗೋಲ್ಡನ್ ಫೆಸೆಂಟ್ ಎಂಬ ಪಕ್ಷಿ ಕೂಡ ಚೀನಾದಲ್ಲಿ ಸ್ಟಾರ್ ಆಗಿ ಮಾರ್ಪಟ್ಟಿದೆ. ಜನರು ಟ್ರಂಪ್ ಅವರ ಕೇಶವಿನ್ಯಾಸವನ್ನು ಆ ಹಕ್ಕಿಯಲ್ಲಿ ಕಾಣುವುದೇ ಅದಕ್ಕೆ ಕಾರಣ ಎನ್ನಲಾಗಿದೆ. ಟ್ರಂಪ್ ಅವರ ಕಿತ್ತಳೆ ಬಣ್ಣದ ರೇಷ್ಮೆಯಂತಹ ತಲೆಗೂದಲನ್ನು ಹೋಲುವ ಪುಕ್ಕವನ್ನು ಹೊಂದಿರುವ ವಿಶಿಷ್ಟ ಪಕ್ಷಿ ಸದ್ಯ ಅವರಂತೆ ಸುದ್ದಿಯಲ್ಲಿದೆ. ಚೀನಾದ ಹಾಂಗ್ ಝೌ ಎಂಬಲ್ಲಿನ ಪತ್ರಕರ್ತನೊಬ್ಬ ಗಂಡು ಪಕ್ಷಿಗಳ ಛಾಯಾಚಿತ್ರವನ್ನು ತೆಗೆದುಕೊಂಡು, ಅದರ ಜೊತೆ ಯು.ಎಸ್. ಮಾಜಿ ಅಧ್ಯಕ್ಷರ ನಡುವೆ 'ಆಸಕ್ತಿ ಹುಟ್ಟಿಸುವ ಹೋಲಿಕೆಯನ್ನು' ತೋರಿಸಿದ ನಂತರ ಚೀನೀ ಮಾಧ್ಯಮಗಳಲ್ಲಿ ಇದು ವ್ಯಾಪಕವಾಗಿ ಹಂಚಿಕೊಂಡವು. ಗಾವೋ ಎಂಬ ಪಕ್ಷಿತಜ್ಞ ಈ ಸುದ್ದಿ ಕೇಳಿ ಆಶ್ಚರ್ಯ ಚಕಿತನಾಗಿದ್ದನಲ್ಲದೆ, ಎರಡರ ನಡುವಿನ ಹೋಲಿಕೆಯನ್ನು ಇದುವರೆಗೆ ಗಮನಿಸಲೇ ಇಲ್ಲವಲ್ಲ ಎಂದು ಅಚ್ಚರಿಯಿಂದ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ.

—ಜೀವನ್ ಶೆಟ್ಟಿ, ಅಂಬಾಗಿಲು






## ಮೈಲುಗಲ್ಲು ಸ್ಮಾರಕ

ಈಗ ಎಲ್ಲೇ ನೋಡಿದರೂ ರಸ್ತೆಯ ಒಂದಲ್ಲ ಒಂದು ಕೆಲಸ ನಡೆಯುತ್ತಲೇ ಇರುತ್ತದೆ. ಒಂದೂವರೆ ಶತಮಾನದ ಹಿಂದೆ, ಈಗಿನ ತಾಂತ್ರಿಕ ಸೌಲಭ್ಯಗಳು ಇರದಿದ್ದ ಕಾಲದಲ್ಲಿ, ರಸ್ತೆ ಕೆಲಸ ಹೇಗೆ ನಡೆಯುತ್ತಿತ್ತು ಎಂಬುದಕ್ಕೆ ಇಲ್ಲಿರುವ ಚಿತ್ರವೇ ಸಾಕ್ಷಿ ಹೇಳುತ್ತದೆ. ಪಾವಗಡದ ಹೊಸ ರಸ್ತೆ ಕೇವಲ ಎರಡೇ ವರ್ಷಗಳಲ್ಲಿ ಪೂರ್ಣವಾಗಿದ್ದರ ದಾಖಲೆ ಇಲ್ಲಿದೆ. ಜೊತೆಗೆ ಪಾವಗಡದಿಂದ ಕೊರಟಗೆರೆ ಮತ್ತು ತುಮಕೂರು ಎಷ್ಟು ದೂರ ಎಂಬ ವಿವರವೂ ಇದೆ. ಆ ಕಾಲದ ಇಂಗ್ಲಿಷ್ ಸ್ಪೆಲ್ಲಿಂಗ್ ಕೂಡ ಅದರ ವೈಚಿತ್ರ್ಯದಿಂದ ಗಮನ ಸೆಳೆಯುತ್ತದೆ. ಈ ಕೆಲಸ ಮಾಡಿಸಿದ ಮೈಸೂರು ಲೋಕೋಪಯೋಗಿ ಇಲಾಖೆಯ ಅಧಿಕಾರಿ, ಮಾಮಲೇದಾರ ಮತ್ತು ಮೇಸ್ತ್ರಿ ಹೆಸರೂ ಇವೆ. ಈ ಮೈಲಿಗಲ್ಲೇ ಒಂದು ಪ್ರಾಚ್ಯ ಸ್ಮಾರಕದಂತಿದೆ.

—ಡಾ.ಬಿ. ರಾಜಶೇಖರಪ್ಪ, ಚಿತ್ರದುರ್ಗ

## ರಾಯನ ಬಸವಣ್ಣ ಕಾಲುವೆ

'ರಾಯಕಟ್ಟಿದ ಹೊಸಪೇಟೆಯಲ್ಲಿ ಕೃಷ್ಣನ ನೆನಪಿನ ಹೆಗ್ಗುರುತುಗಳೆಲ್ಲಿ?' ಎಂಬ ಸ್ಮರಣೀಯ ಬರಹ 'ಸುಧಾ'ದಲ್ಲಿ ಪ್ರಕಟಿತವಾಗಿತ್ತು. ರಾಯನ ನಿರ್ಮಾಣಗಳಲ್ಲಿ ಒಂದಾದ ಬಸವಣ್ಣ ಕಾಲುವೆ ಮೂಲಕ ಈಗಲೂ ಸಾವಿರಾರು ಜನ ತಮ್ಮ ಕೃಷಿಯನ್ನು ನಿರ್ವಹಿಸುತ್ತಿದ್ದಾರೆ.

ಈ ಕಾಲುವೆ ಹೊಸಪೇಟೆ ನಗರದ ಮಧ್ಯಭಾಗದಲ್ಲೇ ಹರಿಯುತ್ತಿದ್ದು ಈಗ ಕೊಳಚೆಗೂಡಿದೆ. ಈ ಮೊದಲು ಬಳ್ಳಾರಿ ಜಿಲ್ಲೆಯಲ್ಲಿದ್ದ ಹೊಸಪೇಟೆ (ಕೃಷ್ಣ ದೇವರಾಯನಿಗೆ ಬಹುಪ್ರಿಯವಾದ ತಾಣ ಅಂದು ಹೊಸಪಟ್ಟಣವಾಗಿತ್ತು) ಈಗ ವಿಜಯನಗರ ಜಿಲ್ಲೆಯಾಗಿದೆ.

ಈ ಸಂದರ್ಭದಲ್ಲಿ ರಾಯರ ನೆನಪಿಸುವ ಬಸವಣ್ಣ ಕಾಲುವೆಯನ್ನು ಸ್ವಚ್ಛ ಮಾಡುವುದಲ್ಲದೇ ಅಕ್ಕ ಪಕ್ಕದ ನಿವಾಸಿಗಳಿಗೆ ಸ್ವಚ್ಛತಾ ಜಾಗೃತಿ ಮೂಡಿಸಬೇಕು. ಈ ಕಾಲುವೆಯ ನೀರಿನಿಂದ ಅನ್ನದಾತರ ಸಾವಿರಾರು ಎಕರೆಯ ಜಮೀನಿಗೆ ನೀರುಣಿಸಲಾಗುತ್ತದೆ. ಈ ಕಾಲುವೆಯ ಇತಿಹಾಸವನ್ನು ತಿಳಿಸುವ ಒಂದು ಫಲಕವನ್ನು ಹಾಕಿಸುವ ಮೂಲಕ ಪ್ರವಾಸಿಗರಿಗೆ ಮಾಹಿತಿ ಸಿಗುವಂತೆ ಮಾಡಿದರೆ ಸೂಕ್ತ ಅಲ್ಲವೇ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

